


International Journal of Kannada Research
www.kannadajournal.com

**ISSN: 2454–5813**
IJKR 2019; 5(3): 33-36
© 2019 IJKR
www.kannadajournal.com
Received: 19-05-2019
Accepted: 21-06-2019

**ಗೋಪಾಲ ಎಸ್**
ಸಂಶೋಧಕರು.
ಡಾ.ಬಿ.ಆರ್.ಅಂಬೇಡ್ಕರ್
ಸಂಶೋಧನ ಹಾಗೂ ವಿಸ್ತರಣ
ಕೇಂದ್ರ. ಮಾನಸ ಗಂಗೋತ್ರಿ.
ಮೈಸೂರು

**Correspondence**
**ಗೋಪಾಲ ಎಸ್**
ಸಂಶೋಧಕರು.
ಡಾ.ಬಿ.ಆರ್.ಅಂಬೇಡ್ಕರ್
ಸಂಶೋಧನ ಹಾಗೂ ವಿಸ್ತರಣ
ಕೇಂದ್ರ. ಮಾನಸ ಗಂಗೋತ್ರಿ.
ಮೈಸೂರು

# ‘ಕೊಳ್ಳೇಗಾಲ ತಾಲ್ಲೂಕಿನ ಶಿವ ಶರಣರ ಗದ್ದುಗೆಗಳು’ – ಜಾನಪದೀಯ ಹಿನ್ನೆಲೆಯಲ್ಲಿ

**ಗೋಪಾಲ ಎಸ್**

ಚಾಮರಾಜನಗರ ಜಿಲ್ಲೆಯ ಪೂರ್ವ ದಿಕ್ಕಿಗೆ ಇರುವ ಕೊಳ್ಳೇಗಾಲ ತಾಲ್ಲೂಕು ಐತಿಹಾಸಿಕವಾಗಿ ಹಾಗೂ ಜಾನಪದೀಯ ದೃಷ್ಟಿಯಲ್ಲಿ ಅತ್ಯಂತ ಮಹತ್ವವನ್ನು ಪಡೆದುಕೊಂಡಿದೆ. ಈ ತಾಲ್ಲೂಕು ಉತ್ತರ ದಿಕ್ಕಿಗೆ ಮಂಡ್ಯ ಹಾಗೂ ಬೆಂಗಳೂರು ಜಿಲ್ಲೆಗಳ ಪ್ರವೇಶಗಳನ್ನು ಹೊಂದಿದೆ. ಕೊಳ್ಳೇಗಾಲ ತಾಲ್ಲೂಕು ಮೊದಲಿಗೆ ಮೈಸೂರು ಜಿಲ್ಲೆಗೆ ಸೇರಿತ್ತು. ಈ ಜಿಲ್ಲೆಯ ಪೂರ್ವ ದಿಕ್ಕಿನ ಒಂದು ತಾಲ್ಲೂಕು ಕೇಂದ್ರವಾಗಿತ್ತು. ದಕ್ಷಿಣದಲ್ಲಿ ಅಂದರೆ ತಮಿಳು ನಾಡಿನ ಕೊಯಮತ್ತೂರು ಜಿಲ್ಲೆಯ ಗಡಿ ಪಶ್ಚಿಮಕ್ಕೆ ನಂಜನಗೂಡು, ತಿರುಮಕೂಡಲು ನರಸೀಪುರವನ್ನು ಒಳಗೊಳ್ಳುವದರ ಜೊತೆಗೆ ಬಿಳಿಗಿರಿರಂಗನ ಬೆಟ್ಟದ ಸಾಲುಗಳು ಹಾಗೂ ಮಾದೇಶ್ವರ ಬೆಟ್ಟದ ತಪ್ಪಲುಗಳಲ್ಲಿ ಹಿಂದೆ ಕೌಹಾಳ (ಕೋಹಳ), ಹಾಲವ ಎಂಬ ಋಷಿಮುನಿಗಳು ಈ ಪ್ರದೇಶದಲ್ಲಿ ವಾಸಿಸುತ್ತಿದ್ದರೆಂದು ತಿಳಿದುಬರುತ್ತದೆ. ಅದರಿಂದಾಗಿ ಇದಕ್ಕೆ ಕೊಳ್ಳೇಗಾಲ ಎಂಬ ಹೆಸರು ಬಂತೆಂದು ಐತಿಹ್ಯವಿದೆ.

ಜನಪದರ ಬಾಯಲ್ಲಿ ಇದು ಕೋಳಿಗಾಲ, ಕೋಳೆಗಾಲ, ಕೊಳ್ಳೇಗಾಲವಾಗಿ ಮಾರ್ಪಟ್ಟಿದೆ ಎಂಬ ಪ್ರತೀತಿ ಇದೆ. ಪ್ರಾಚೀನ ಕಾಲದ ಅರ್ಥಶಾಸ್ತ್ರಜ್ಞರಾದ ಕೌಟಿಲ್ಯನಿಗೂ ಕೊಳ್ಳೇಗಾಲಕ್ಕೂ ಬಹಳ ನಂಟಿದೆ. ಕೌಟಿಲ್ಯನು ತನ್ನ ಅರ್ಥಶಾಸ್ತ್ರದಲ್ಲಿ ಕೋಹಳ – ಹಾಲವ ಎಂಬ ಇಬ್ಬರು ಮುನಿಗಳು ಇಲ್ಲಿ ತಪಸ್ಸನ್ನಾಚರಿಸುವುದರ ಮೂಲಕ ಕೊಳ್ಳೇಗಾಲಕ್ಕೆ ತನ್ನದೇ ಆದ ಮಹತ್ವವನ್ನು ತಂದುಕೊಟ್ಟರೆಂಬ ಉಲ್ಲೇಖವಿದೆ. ಅಲ್ಲದೆ ಈ ತಾಲ್ಲೂಕು ಮಾಯಾ, ಯಕ್ಷಿಣಿ, ಮಾಟ ಮಂತ್ರಗಳ ವಿದ್ಯೆಯಲ್ಲಿ ಬಹಳ ಮುಂದುವರಿದಿತ್ತೆಂಬ ವಿಚಾರವಿದೆ.

ಈ ತಾಲ್ಲೂಕಿನ ಬಸತೀಪುರದಲ್ಲಿ ಸುಮಾರು ಕ್ರಿ.ಶ 480ರಲ್ಲಿ ಪೂಜ್ಯ ಪಾದನೆಂಬ ಜೈನ ಮುನಿಯು ವಾಸಿಸುತ್ತಿದ್ದನೆಂದು ಅಲ್ಲಿ ದೊರೆತ ಜೈನ ವಿಗ್ರಹ ಮದರಾಸಿನ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿದೆ ಎಂಬ ದಾಖಲೆಯಿದೆ. ನಿಜಗುಣ ಶಿವಯೋಗಿ, ಮುಪ್ಪಿನ ಷಡಕ್ಷರಿ ಇದೇ ತಾಲ್ಲೂಕಿನವರಾಗಿದ್ದಾರೆ. ಮೊದಲು ನಿಜಗುಣ ಶಿವಯೋಗಿಯವರು ಶಂಭುಲಿಂಗನ ಬೆಟ್ಟದ ಸುತ್ತಲ ಪ್ರದೇಶದ ಅರಸನಾಗಿದ್ದರು. ಆನಂತರ ವಿರಕ್ತನಾಗಿ ಯೋಗ ನಿರತರಾದರೆಂದು ಚರಿತ್ರೆಯಿಂದ ಕಂಡುಬರುತ್ತದೆ. ಉತ್ತರದ ದಾರ್ಶನಿಕ, ವೈರಾಗ್ಯಮೂರ್ತಿ, ಸಂಗೀತಜ್ಞರು, ಕವಿಗಳೂ ಆದ ಶ್ರೀ ನಿಜಗುಣ ಶಿವಯೋಗಿಗಳು ರಚಿಸಿದ ಅನುಭವಸಾರ, ಕೈವಲ್ಯ ಪದ್ಧತಿ, ಪರಮಾರ್ಥಗೀತೆ, ಪರಮಾನುಭಾವ ಭೋದೆ, ಪರಮಾರ್ಥ ಪ್ರಕಾಶಿತೆ, ವಿವೇಕ ಚಿಂತಾಮಣಿ ಎಂಬ ಗ್ರಂಥಗಳು ತನ್ನದೇಯಾದ ಮಹತ್ವವನ್ನು ಪಡೆದುಕೊಂಡಿವೆ. ಅದೇ ರೀತಿ ಕ್ರಿ.ಶ 12ನೇ ಶತಮಾನದ ಪ್ರಸಿದ್ಧ ವಚನಕಾರರಾದ ಹರಳಯ್ಯನೆಂಬ ಶರಣನು ಕಲ್ಯಾಣ ಕ್ರಾಂತಿಯಾದ ನಂತರ ಇಲ್ಲಿ ಬಂದು ನೆಲೆಸಿದರೆಂಬ ಉಲ್ಲೇಖಗಳಿವೆ. ಈ ಭಾಗ ಮೊದಲಿಗೆ 1799 ರಲ್ಲಿ ಟಿಪ್ಪುವಿನ ಪತನದ ನಂತರ ಬ್ರಿಟೀಷ್ ಅಧಿಪತ್ಯಕ್ಕೆ ಒಳಪಟ್ಟು ಮದ್ರಾಸ್ ಪ್ರಾಂತ್ಯದ ಕೊಯಮತ್ತೂರು ಜಿಲ್ಲೆಗೆ 1956ರವರೆವಿಗೂ ಸೇರಿತ್ತು. ತದನಂತರ ಕೊಳ್ಳೇಗಾಲವು ರಾಜ್ಯ ವಿಂಗಡಣೆಯ ಸಂದರ್ಭದಲ್ಲಿ ಮೈಸೂರು ರಾಜ್ಯಕ್ಕೆ ಸೇರಿತು. 1997ರಲ್ಲಿ ಚಾಮರಾಜನಗರ ಹೊಸ ಜಿಲ್ಲೆಯಾಗಿ ಕೊಳ್ಳೇಗಾಲ ಚಾಮರಾಜನಗರದ ಒಂದು ತಾಲ್ಲೂಕಾಗಿ ಸೇರ್ಪಡೆಯಾಯಿತು. ಕ್ರಿ.ಶ 1838ರಲ್ಲಿ ಜೈನ ಕವಿ ದೇವಚಂದ್ರನಿಂದ ರಚಿತವಾದ ರಾಜಾವಳಿಕತೆಯಲ್ಲಿ ಕೊಳ್ಳೇಗಾಲದ ಪೂರ್ವದಲ್ಲಿರುವ ಮಣಗಳ್ಳಿ ಪ್ರದೇಶದಲ್ಲಿ ಸಾಮಂತ ಭದ್ರನೆಂಬ ಜೈನಾಚಾರ್ಯರಿದ್ದರೆಂಬುದು ತಿಳಿದು ಬರುತ್ತದೆ. ಹೀಗಾಗಿ ಮೊದಲು ಈ ಪ್ರದೇಶದಲ್ಲಿ ಜೈನ ಧರ್ಮವಿತ್ತೆಂದು ಕಂಡು ಬರುತ್ತದೆ. ಇವರನ್ನು ಮಣಿಸಲು ಶೈವರು

ತಂತ್ರ ಮಂತ್ರಗಳನ್ನು ಆಚರಣೆಯಲ್ಲಿ ತಂದರೂ ಸಹ ಜೈನರು ಅತಿಮಾನುಷ ಶಕ್ತಿಗಳನ್ನು ಆರಾಧಿಸುತ್ತಾ ಮಾಟ, ತಂತ್ರ, ಮಂತ್ರ, ಮೋಡಿ ಮೊದಲಾದ ದುಷ್ಟಾಚರಣೆಗಳನ್ನು ಮೈಗೂಡಿಸಿಕೊಂಡಿದ್ದರು ಎಂದು ತಿಳಿದುಬರುತ್ತದೆ. ಪ್ರಸ್ತುತ ಈ ಭಾಗದಲ್ಲಿ ಇಂತಹ ದುಷ್ಟ ಶಕ್ತಿಗಳ ಪ್ರಭಾವ ಬಹಳ ಎತೇಚ್ಚವಾಗಿ ಕಂಡು ಬರುವುದುಂಟು. ಜನಪದ ಕಲೆಗಳಲ್ಲಿ ನೀಲಗಾರರು ಮತ್ತು ದೇವರ ಗುಡ್ಡರು ತಮ್ಮದೇ ಆದ ಛಾಪನ್ನು ಮೂಡಿಸುವುದರ ಮೂಲಕ ಪ್ರಸಿದ್ಧಿ ಪಡೆದುಕೊಂಡಿದ್ದಾರೆ. ಹಾಗಾಗಿ ಈ ಭಾಗದಲ್ಲಿ ಮಲೈ ಮಹದೇಶ್ವರ ಮತ್ತು ಮಂಟೇಸ್ವಾಮಿಯವರ ಶಿಷ್ಯರು ಪ್ರಭಾವಿತರಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಕೆಲವೊಂದು ಜಾನಪದೀಯ ನೆಲೆಗಳನ್ನು ಕುರಿತು ಇಲ್ಲಿ ಚರ್ಚಿಸಲಾಗಿದೆ.

**ಶಿವಶರಣ ಹರಳಯ್ಯನವರ ಗದ್ದುಗೆ:** ಕೊಳ್ಳೇಗಾಲದಿಂದ ಸುಮಾರು 3 ಕಿ.ಮೀ ದೂರದಲ್ಲಿ ಹರಳೆ ಗ್ರಾಮವಿದೆ. ಶಿವಶರಣರ ತತ್ವಗಳು ಹಾಗೂ ಅವರ ಆಚಾರ ವಿಚಾರಧಾರೆಗಳು ಇಂದಿಗೂ ಪ್ರಸ್ತುತವಾಗಿವೆ. ಹರಳೆ ಗ್ರಾಮದ ಹೊರವಲಯದಲ್ಲಿ ಶಿವಶರಣ ಹರಳಯ್ಯನವರ ಗದ್ದುಗೆ ಬಹಳ ಇತಿಹಾಸ ಪ್ರಸಿದ್ಧ ಪುಣ್ಯಸ್ಥಳವಾಗುವುದರ ಮೂಲಕ ಹೆಸರುವಾಸಿಯಾಗಿದೆ. ಈ ಊರಿನಲ್ಲಿ ಒಂದು ಸಾವಿರದಷ್ಟು ಜನಸಂಖ್ಯೆ ಹೊಂದಿರುವ ಪುಟ್ಟ ಹಳ್ಳಿಯಾದರೂ ಹರಳೆ ಗ್ರಾಮಸ್ತರಿಗೆ ಶರಣ ಹರಳಯ್ಯ ಗದ್ದುಗೆ ಅಂದರೆ ಅಷ್ಟೇ ನಂಬಿಕೆ, ಭಯ, ಭಕ್ತಿ ಇದೆ. ಗ್ರಾಮದಲ್ಲಿ ಏನಾದರೂ ತೊಂದರೆಗಳು ಉಂಟಾದರೆ ಪಂಚಾಯಿತಿಗಳು ಇಲ್ಲಿಯೇ ನಡೆಯುತ್ತಿದ್ದವು. ಇಲ್ಲಿ ಪಂಚಾಯಿತಿ ತೆಗೆದುಕೊಳ್ಳುವ ತೀರ್ಮಾನಕ್ಕೆ ಬದ್ಧರಾಗಿ ನಡೆದುಕೊಳ್ಳಬೇಕು. ಇಲ್ಲಿ ಯಾವುದೇ ಸುಳ್ಳು ಹೇಳಬಾರದು. ಒಂದು ವೇಳೆ ಸುಳ್ಳು ಹೇಳಿದರೆ ಅಂತವನಿಗೆ ಅಪಾಯ (ತೊಂದರೆ) ಕಟ್ಟಿಟ್ಟಬುತ್ತಿ ಎಂಬ ಪ್ರತೀತಿ ಇದೆ. ಮಹಾನ್ ಶಿವಶರಣ, ಮಹಾನ್ ಮಾನವತಾವಾದಿಯಾದ ಹರಳಯ್ಯನವರು ಕ್ರಿ.ಶ 12ನೇ ಶತಮಾನದಲ್ಲಿ ಬಸವಣ್ಣನವರ ಅನುಯಾಯಿಯಾಗಿ ಅಂದು ನಡೆದ ಕ್ರಾಂತಿಯ ಪರಿಣಾಮವಾಗಿ ಇಲ್ಲಿಗೆ ಬಂದು ಐಕ್ಯರಾದರೆಂಬ ವಿಚಾರಗಳಿವೆ. ಈ ಹರಳೆ ಗ್ರಾಮ ಕಾವೇರಿ ಬಲದಂಡೆಯ ಮೇಲಿದ್ದು, ಕಾವೇರಿ ನದಿಯಲ್ಲಿ ಎಷ್ಟೇ ಪ್ರವಾಹ ಬಂದರೂ ಈ ಊರಿಗೆ ನೀರು ಏರುವುದಿಲ್ಲ. ಒಂದು ವೇಳೆ ಹರಳೆ ಗ್ರಾಮ ನೀರಿನಲ್ಲಿ ಮುಳುಗಿದರೆ ಕೊಳ್ಳೇಗಾಲದ ಮರಡಿ ಗುಡ್ಡದ ಮೇಲೆ ನೀರು ಬರುತ್ತದೆ ಎಂಬ ಜನಪದೀಯ ನಂಬಿಕೆಗಳಿವೆ.

**ಚಿಕ್ಕಲ್ಲೂರು ಸಿದ್ದಪ್ಪಾಜಿ ಕ್ಷೇತ್ರ:** ಕೊಳ್ಳೇಗಾಲದಿಂದ ಸುಮಾರು 24 ಕಿ.ಮೀ ದೂರದಲ್ಲಿ ಚಿಕ್ಕಲ್ಲೂರು ಶ್ರೀಕ್ಷೇತ್ರವಿದೆ. ಜಾನಪದ ಜಗತ್ತಿನಲ್ಲಿ ಸಿದ್ದಪ್ಪಾಜಿಗೆ ವಿಶಿಷ್ಟವಾದ ಸ್ಥಾನವಿದ್ದು, ಈ ಪ್ರದೇಶದ ಜನಪದ ಆರಾಧ್ಯ ದೈವವಾಗಿ ಜನರ ಬಾಯಲ್ಲಿ ನಲಿದಾಡುವ ದೈವ ಸಿದ್ದಪುರುಷ ಸಿದ್ದಪ್ಪಸ್ವಾಮಿ. ಪ್ರತಿ ವರ್ಷವೂ ಜನವರಿ ತಿಂಗಳಿನಲ್ಲಿ 5 ದಿನಗಳ ಕಾಲ ಸಿದ್ದಪ್ಪಾಜಿ ಜಾತ್ರೆ, ಪಂಕ್ತಿ ಸೇವೆ, ಭಂಗಿ ಸೇವೆ, ಚಂದ್ರಮಂಡಲೋತ್ಸವ ಮುತ್ತುರಾಯನ ಸೇವೆ ಸೇರಿದಂತೆ ಹಲವು ಉತ್ಸವಗಳು ಜರುಗಲಿದ್ದು, ರಾಜ್ಯದ ನಾನಾ ಭಾಗಗಳಿಂದ ಈ ಪುಣ್ಯಕ್ಷೇತ್ರಕ್ಕೆ ಜನರು ಆಗಮಿಸಿ ಸಿದ್ದಪ್ಪಾಜಿಯನ್ನು ಆರಾಧಿಸುವುದು ಇಲ್ಲಿನ ಸಂಪ್ರದಾಯವಾಗಿ ಕಂಡು ಬರುತ್ತದೆ. ಸಮಾನತೆ ಸಾರುವ ಪ್ರಸಿದ್ಧ ಹಾಗೂ ಪುಣ್ಯಕ್ಷೇತ್ರವೆಂತಲೂ ಚಿಕ್ಕಲ್ಲೂರು ಸಿದ್ದಪ್ಪಾಜಿ ಕ್ಷೇತ್ರವನ್ನು ಕರೆಯಲಾಗುತ್ತದೆ. ಚಿಕ್ಕಲ್ಲೂರಿನ ಉತ್ತರ ದಿಕ್ಕಿಗೆ ಸುಮಾರು 6 ಕಿ.ಮೀ ದೂರದಲ್ಲಿ ಕಾವೇರಿ ನದಿಯು ಹರಿಯುತ್ತಿದ್ದು ಸಾಂಸ್ಕೃತಿಕವಾಗಿ ಚಿಕ್ಕಲ್ಲೂರು, ಮುತ್ತತ್ತಿ, ಹಲಗೂರುಗಳನ್ನು ಬೆಸೆಯುವ ಸೇತುವೆಯಾಗಿದೆ. ಸುತ್ತಾಮುತ್ತ ಬೆಟ್ಟ-ಗುಡ್ಡ, ಕಾಡು ಕಣಿವೆಗಳಿಂದ ಆವೃತ್ತವಾದ ಮರಗಳ ತೋಪಿನ ಮಧ್ಯೆ ಸಿದ್ದಪ್ಪಾಜಿ ದೇವಾಲಯವಿದೆ. ಇಲ್ಲಿ ನಡೆಯುವ ಜಾತ್ರೆಯು ಜಾನಪದೀಯ ಹಿನ್ನೆಲೆಯಲ್ಲಿ ನೋಡಿದಾಗ ಒಂದು ಪ್ರಪಂಚವೇ ಸೃಷ್ಠಿಯಾದಂತೆ ಗೋಚರಿಸುತ್ತದೆ. ನಂತರ ಸಮಾನತೆ ಸಾರಿದ ಇಬ್ಬರು ಮಹಾನ್ ಪುರುಷರೆಂದರೆ ಕ್ರಿ.ಶ 15 ಮತ್ತು 16ನೇ ಶತಮಾನದ ಕಾಲಕ್ಕೆ ಜೀವಿಸಿದ್ದಿರಬಹುದಾದ ಮಂಟೇಸ್ವಾಮಿ ಮತ್ತು ಮಲೆಮಾದೇಶ್ವರರು ಮಂಟೇಸ್ವಾಮಿಯು ದಲಿತರಲ್ಲಿ ಬಲಗೈ ಪಂಗಡಕ್ಕೆ ಸೇರಿದವರೆಂದು ಹಾಗೂ ಮಹದೇಶ್ವರಸ್ವಾಮಿಯು ಎಡಗೈ ಪಂಗಡಕ್ಕೆ ಸೇರಿದವರೆಂಬ ವಿಚಾರವು ಕ್ರಿ.ಶ 1838ರಲ್ಲಿ ರಚಿತವಾಗಿರುವ ದೇವಚಂದ್ರನ ರಾಜಾವಳಿ ಕತೆಯಲ್ಲಿ ಕಂಡು ಬರುತ್ತದೆ. ಇಲ್ಲಿ ಪ್ರತೀ ವರ್ಷ ಜಾತ್ರೆ, ಉತ್ಸವಗಳು ಸಾಂಪ್ರಾದಾಯಿಕವಾಗಿ ನಡೆದುಕೊಂಡು ಬರುತ್ತಿರುವುದನ್ನು ಕಾಣಬಹುದಾಗಿದೆ. ಇವರ ಪರಂಪರೆಯನ್ನು ಶರಣರು, ಸಿದ್ಧರು, ಮಹಾತ್ಮರು, ದೇವಮಾನವರು, ದೇವರುಗಳೆಂದು ಹೇಳುತ್ತಾ ಚಾರಿತ್ರಿಕವಾಗಿ ಜನಪದರ ಹಾಡುಗಳಿಂದ ತಿಳಿದುಬರುತ್ತದೆ. ಕೊಳ್ಳೇಗಾಲ ತಾಲ್ಲೂಕಿನ ಚಿಕ್ಕಲ್ಲೂರು ಜಾತ್ರೆ ಎಂದರೆ ಜಾನಪದ ಸಂಗೀತ ಮತ್ತು ಸಾಹಿತ್ಯದ ಜಾತ್ರೆಯೇ ಆಗಿರುತ್ತದೆ. ಹಾಲ ಬೆಳದಿಂಗಳ ರಾತ್ರಿಯಲ್ಲಿ ವಿಪರೀತ ಜನಸಂದಣಿಯ ಮದ್ಯೆ ಧೂಪ, ಸಾಂಬ್ರಾಣಿಯ ಘಮಲು ಸುತ್ತಲೂ ಹರಡಿಸುತ್ತಾ. ಶಂಖ, ಜಾಗಟೆ, ಕೊಂಬು ಕಹಳೆಯ ನಾದ ಮೇಲಿಂದ ಮೇಲೆ ಮೊಳಗುತ್ತಿರುತ್ತವೆ. ಇವೆಲ್ಲದಕ್ಕೂ ಮಿಗಿಲಾಗಿ ಜನಪದರು ಕಟ್ಟಿ ಹಾಡುವ ಏರು ಧ್ವನಿಯ ಹಾಡುಗಳಂತೂ ಬಹಳ ವಿಶೇಷವಾಗಿ ಕೇಳಿ ಬರುತ್ತವೆ.

**ಕುರುಬನ ಕಟ್ಟೆ ಲಿಂಗಯ್ಯ, ಚೆನ್ನಯ್ಯ ಕ್ಷೇತ್ರ:** ಕೊಳ್ಳೇಗಾಲ ತಾಲ್ಲೂಕಿನ ಕೆಂಪನಪುರ, ತಿಮ್ಮರಾಜಪುರದ ಮಾರ್ಗವಾಗಿ ಬೆಟ್ಟದ ತಪ್ಪಲಿನಲ್ಲಿ ಕುರುಬನ ಕಟ್ಟೆ ಇದೆ. ಇಲ್ಲಿ ಲಿಂಗಯ್ಯ, ಚೆನ್ನಯ್ಯರವರ ಗದ್ದುಗೆಗಳಿವೆ. ಇವರುಗಳು ಮಂಟೇಸ್ವಾಮಿರವರ ಪರಿವಾರದಲ್ಲಿ ಪ್ರಮುಖ ಶಿಷ್ಯರಾಗಿ, ಸಿದ್ಧರಾಗಿ ಕಾಣಿಸಿಕೊಂಡಿದ್ದಾರೆ. ಕ್ರಿ.ಶ 12 ನೇ ಶತಮಾನದ ಕಲ್ಯಾಣದ ಬಸವಣ್ಣ ಇಡೀ ವಚನ ಚಳುವಳಿಯಲ್ಲಿ ಅಸ್ಪೃಶ್ಯ ಶರಣರಿಗೆ ಪ್ರಾಮುಖ್ಯತೆಯನ್ನು ನೀಡಿ ಅವರನ್ನೇ ಚಳುವಳಿಯ ನೇತಾರರನ್ನಾಗಿಸಿ ಸಮಾಜದಲ್ಲಿ ಮೊದಲ ಸ್ಥಾನಕ್ಕೇರಿಸುತ್ತಾನೆ. ಅದನ್ನು ಸಾಧಿಸುವಲ್ಲಿ ತಾವೇ ಮೊದಲಿಗನಾಗಿ ತನ್ನನ್ನು ಮಾದಾರ ಚೆನ್ನಯ್ಯ, ಡೋಹಾರ ಕಕ್ಕಯ್ಯನ ಮನೆಯ ಮಗನೆಂದು ಹೇಳಿಕೊಳ್ಳುತ್ತಾ ಸಾಮಾಜಿಕ ಸಮಾನತೆಗೆ ಕ್ರಾಂತಿ ಕಹಳೆ ಊದುತ್ತಾನೆ. ಲಿಂಗಯ್ಯ, ಚೆನ್ನಯ್ಯರು ಅಸ್ಪೃಶ್ಯ ಕುಲದವರೆಂದು ಇದರ ಬಗ್ಗೆ ಮಂಟೇಸ್ವಾಮಿ ಹೀಗೆ ಹೇಳುತ್ತಾರೆ ಎಂದು ಕಾವ್ಯದಲ್ಲಿ ಉಲ್ಲೇಖವಾಗಿದೆ. ಕುರುಬನ ಕಟ್ಟೆಯಲ್ಲಿ ಪ್ರಸ್ತುತ ಲಿಂಗಯ್ಯ, ಚೆನ್ನಯ್ಯರವರ ಹೆಸರಿನಲ್ಲಿ ಎರಡು ಕಂಡಾಯಗಳು ಧರೆಗೆ ದೊಡ್ಡವರಾಗಿ ಹೊನ್ನಾಯಕನ ಹಳ್ಳಿಗೆ ಬಂದಾಗ ಹೊನ್ನಯ್ಯ, ಚೆನ್ನಯ್ಯ ಎಂಬ ಎಡಗೈ, ಬಲಗೈನ ಇಬ್ಬರು ಶರಣರನ್ನು ಶಿಶು ಮಕ್ಕಳಾಗಿ ಪಡೆಯುತ್ತಾರೆ. ಮಂಟೇಸ್ವಾಮಿಯವರು ಸಿದ್ದಪ್ಪಾಜಿಯನ್ನು ಚಿಕ್ಕಲ್ಲೂರಿನಲ್ಲಿ ನೆಲೆಗೊಳಿಸಿದಂತೆ ಲಿಂಗಯ್ಯ, ಚೆನ್ನಯ್ಯರನ್ನು ಕುರುಬನ ಕಟ್ಟೆ ಮಠದಲ್ಲಿ ನೆಲೆಗೊಳಿಸುತ್ತಾರೆ ಎಂಬುದಾಗಿ ಮಂಟೇಸ್ವಾಮಿಯ ಜನಪದ ಕಾವ್ಯದಲ್ಲಿ ತಿಳಿದುಬರುತ್ತದೆ. ಇಂದಿಗೂ ಕುರುಬನ ಕಟ್ಟೆ ಲಿಂಗಯ್ಯ, ಚೆನ್ನಯ್ಯರ ಕಂಡಾಯಗಳಲ್ಲಿ ಚರ್ಮದ ಬಾರುಗಳಾದ ಕರಡಿ ಮಜಲುಗಳನ್ನು ಹಾಕಿದ್ದಾರೆ. ಆದ್ದರಿಂದ ಲಿಂಗಯ್ಯ, ಚೆನ್ನಯ್ಯನವರು ಚರ್ಮದ ಕಸುಬು ಮಾಡುವ ಮಾದಿಗ ಕುಲಕ್ಕೆ ಸೇರಿದವರೆಂದು ಸೂಚಿಸುತ್ತದೆ. ಈ ಹಿನ್ನೆಲೆಯಿಂದಲೇ ಕುರುಬನ ಕಟ್ಟೆ ಕ್ಷೇತ್ರ ಎಡಗೈ, ಬಲಗೈನವರೇ ಹೆಚ್ಚಾಗಿ ಪೂಜೆಗೆ ಒಳಗಾಗುತ್ತಿರುವುದು ಕಂಡು ಬರುತ್ತದೆ. ಜನಪದರ ದೃಷ್ಠಿಯಿಂದ ಮಂಟೇಸ್ವಾಮಿ ಪರಂಪರೆಯು ಬೇರೆಲ್ಲಾ ಧರ್ಮ ಜಾತಿ ಪಂಥದವರಿಗಿಂತ ಹೆಚ್ಚು ಜಾತ್ಯತೀತ, ಧರ್ಮಾತೀತ

ಮಾನವೀಯತೆ ಅಲ್ಲದೆ ಕೋಮು ಸಾಮರಸ್ಯಕ್ಕೆ, ಧರ್ಮ ಸೌಹಾರ್ದಕ್ಕೆ ಹೆಸರುವಾಸಿಯಾದ ತಾಣವಾಗಿದೆ.

**ಮಲೈ ಮಹದೇಶ್ವರನ ಬೆಟ್ಟದ ಕ್ಷೇತ್ರ:** ಕೊಳ್ಳೇಗಾಲ ತಾಲ್ಲೂಕಿನಿಂದ 80 ಕಿ.ಮೀ ದೂರದಲ್ಲಿ ಮಲೈ ಮಹದೇಶ್ವರನ ಬೆಟ್ಟವಿದೆ. ಇದು ಅತ್ಯಂತ ಮಹತ್ವವಾದ ಜಾನಪದೀಯ ಕ್ಷೇತ್ರವಾಗಿದೆ. ಅಲ್ಲದೆ ಇದೊಂದು ಯಾತ್ರಾ ಸ್ಥಳವೂ ಕೂಡ ಆಗಿದೆ. ಮಲೈ ಮಹದೇಶ್ವರನ ಬೆಟ್ಟದಲ್ಲಿ ಹಲವಾರು ಬಗೆಯ ಉತ್ಸದ ಕಾರ್ಯಗಳು ಪ್ರಸ್ತುತದಲ್ಲಿಯೂ ನಡೆಯುತ್ತ ಬರುತ್ತಿರುವುದು ಹೆಮ್ಮೆಯ ಸಂಗತಿ.
ಮಲೈ ಮಹದೇಶ್ವರ ಚರಿತ್ರೆ ಜನಪದರ ದೃಷ್ಠಿಯಲ್ಲಿ ಅಚ್ಚಳಿಯದೆ ಇರುವ ಹೆಸರು. ಈ ಬೆಟ್ಟಕ್ಕೆ ಮಲೈ ಮಹದೇಶ್ವರ, ಮಾದೇಶ್ವರ ಬೆಟ್ಟ, ಮಾದಪ್ಪನ ಬೆಟ್ಟ ಹೀಗೆ ಹಲವು ಹೆಸರುಗಳಿಂದ ಕರೆಯತ್ತಾರೆ. ಈ ಪುಣ್ಯಕ್ಷೇತ್ರಕ್ಕೆ ಕರ್ನಾಟಕದಷ್ಟೇ ನೆರೆಯ ರಾಜ್ಯವಾದ ತಮಿಳುನಾಡಿನ ಭಾಗದಿಂದಲೂ ಹಲವಾರು ಭಕ್ತಾದಿಗಳು ಬರುತ್ತಾರೆ. ಪುರಾಣದ ಪ್ರಕಾರವಾಗಿ ಆನೆಮಲೆ, ಜೇನುಮಲೆ, ಕಾನುಮಲೆ, ಪಚ್ಚೆಮಲೆ, ಪದವಿಮಲೆ, ಪೊನ್ನಾಚಿಮಲೆ, ಕೊಂಡುಮಲೆ, ಇನ್ನೂ ಮೊದಲಾದ 77 ಮಲೆಗಳಿವೆ. ಈ ಎಲ್ಲಾ ಹೆಸರುಗಳನ್ನು ಹೊಂದಿರುವ ಗಿರಿಧಾಮದಲ್ಲಿ ಮಲೈ ಮಹದೇಶ್ವರನ ದೇವಾಲಯವಿದೆ. ಈ ದೇವಾಲಯವು ಕ್ರಿ.ಶ 15 ಹಾಗೂ 16ನೇ ಶತಮಾನದಲ್ಲಿ ಕಟ್ಟಲಾಗಿದೆ ಎಂಬ ಪ್ರತೀತಿ ಇದೆ. ಈತನ ಮೇಲೆ ಜನಪದ ಕತೆ, ಕಾವ್ಯ, ಹಾಡುಗಳ ಮೂಲಕ ಮಲೆ ಮಹದೇಶ್ವರನನ್ನು ಪ್ರಸ್ತುತದಲ್ಲೂ ಕೂಡ ನೆನೆದವರ ಮನದಲ್ಲಿ ನೆಲೆಸಿರುತ್ತಾನೆ. ಹಾಗೂ ಮಾದೇಶ್ವರರು ಇಂದಿಗೂ ಜನಪದರ ಆರಾಧ್ಯ ದೈವ ಎಂಬ ನಂಬಿಕೆ ಪ್ರತಿಯೊಬ್ಬರಲ್ಲಿಯೂ ಕಂಡು ಬರುತ್ತದೆ. ಬೆಟ್ಟದ ಮಾದಪ್ಪನನ್ನು ನೋಡಲು ಭಕ್ತಾದಿಗಳು ಕಾಲ್ನಡಿಗೆಯಲ್ಲಿ ಈಗಲೂ ಹಬ್ಬ–ಹರಿದಿನಗಳಲ್ಲೂ ಬರುತ್ತಾರೆ. ಕಂಸಾಳೆಯ ಗುಡ್ಡರು ಹಣೆಗೆ, ಕಣ್ಣಿಗೆ, ಕಿವಿಗೆ ವಿಭೂತಿ ಧರಿಸಿಕೊಂಡು ಕೊರಳಲ್ಲಿ ರುದ್ರಾಕ್ಷಿ ಕಟ್ಟಿಕೊಂಡು ತಲೆಯ ಮೇಲೆ, ಹೆಗಲ ಮೇಲೆ ನೀರು, ಬುತ್ತಿ ಪೂಜಾ ಸಾಮಗ್ರಿಗಳನ್ನು ಇಟ್ಟುಕೊಂಡು ಕಂಸಾಳೆಯ ಶಬ್ದ ಮಾಡುತ್ತಾ ಬರುತ್ತಾರೆ. ಹೀಗೆ ಬರುವಾಗ ದಾರಿಯುದ್ದಕ್ಕೂ 'ಆನೆಮಲೆ, ಜೇನುಮಲೆ, ಕಾನಮಲೆ, ದುತ್ತಮಲೆ, ಗುಂಜು ಮಲೆ, ಗುಲಗಂಜಿ ಮಲೆ, ಏಳು ಮಲೆ, ಎಪ್ಪತ್ತೇಳು ಮಲೆಯಲ್ಲಿ ತಪ್ಪದೆ ನಲಿದು ನಾಟ್ಯ ಮಾಡುವಂತಹ ನಮ್ಮ ಮುದ್ದು ಮಾದಪ್ಪನ ಪಾದಕ್ಕೆ ಒಂದು ಸಲ ಉಘೇ ಅನ್ನಿ' ಎಂದು ಗತ್ತಿನಲ್ಲಿ ಸೊಲ್ಲಿಕ್ಕಿದಾಗ ಉಳಿದ ಭಕ್ತರೆಲ್ಲಾ ಒಕ್ಕೊರಲಿನಿಂದ ಉಘೇ ಉಘೇ ಎಂದು ಜಯ ಘೋಷ ಕೂಗುತ್ತಾರೆ. ಹೆಣ್ಣು ಮಕ್ಕಳು ಕೂಡಾ ಮೊಗ್ಗೆ ಮಾತಾಡು ಮಲ್ಲಿಗೆ, ಸಂಪಿಗೆ, ಸಾವಂತಿಗೆ ಹೂವೆ ಮಾತಾಡು ಮಲ್ಲಿಗೆ ಮಾದಪ್ಪ ಗುರುವಲ್ಲಿ ಮಜ್ಜಣಾದ ಕೊಳುವೆಲ್ಲಿ ಜಾಗಲಲ್ಲಿ, ಒಪ್ಪುವಲ್ಲಿ ಮಾಡೇವು ನಿಮ್ಮ ರುದ್ರಾಕ್ಷಿ ಮಠದಲ್ಲಿ ಎಂದೆಲ್ಲಾ ಕೇಳುವವರ ಕಿವಿಗೆ ಹಿತವಾಗುವಂತೆ ಹಾಡುತ್ತಾ ಸಾಗುತ್ತಾರೆ. ಅಲ್ಲದೆ "ಮಾದಪ್ಪಾ ಬರುವಾಗ ಮಾಲೆಲ್ಲಾ ಘಮ್ಮೆಂದೋ ಅಂದಾದ ಚಂದಾದ ಮಾಯಕಾರ ಮಾದೇವನಿಗೆ ಚೆಲ್ಲಿದರು ಮಲ್ಲಿಗೆಯ" ಈ ಜನಪದದ ಹಾಡುಗಳನ್ನು ದಾರಿ ಉದ್ದಕ್ಕೂ ಹಾಡುತ್ತಾರೆ. ಇಲ್ಲಿ ಸದಾ ಕಂಸಾಳೆಯ ಸದ್ದು ಕೇಳಿ ಬರುತ್ತಿರುತ್ತದೆ. ಪುರಾಣ ಮತ್ತು ಜನಪದೀಯವಾಗಿ ಮಾದೇಶ್ವರರು ತುಂಬಾ ಪರಿಚಿತರಾಗಿದ್ದಾರೆ. ಅದರಲ್ಲೂ ಜನಪದರು ಈತನ ಮೇಲೆ ಅನೇಕ ಹಾಡುಗಳನ್ನು ಕಟ್ಟಿ ರಾಗಬದ್ಧವಾಗಿ ಹಾಡುವುದನ್ನು ಕೇಳುತ್ತಾ ಇದ್ದರೆ ಹಾಗಯೇ ಕೇಳುತ್ತಾ ಇರಬೇಕು ಎಂದೆನಿಸುತ್ತದೆ. ಕರ್ನಾಟಕ ಜನಪದ ಸಂಸ್ಕೃತಿ ಹಿನ್ನೆಲೆಯಲ್ಲಿ ಹಲವು ಪಂಥ ಪರಂಪರೆಗಳಿವೆ. ಅಂತಹ ಪಂಥಗಳಲ್ಲಿ ಮೈಸೂರು ಭಾಗದ ಕಂಸಾಳೆ ದೇವರ ಗುಡ್ಡರ ಪಂಥವೂ ಒಂದು. ಮಾದೇಶ್ವರ ದೇವರ ಗುಡ್ಡರ ಪಂಥ ನೆಲೆಸಿದ ಕತ್ತಲ ರಾಜ್ಯದ ಪರಿಸರ ಮತ್ತು ಪರಂಪರೆಯಲ್ಲಿ ಹಲವು ತಾಂತ್ರಿಕ ಲಕ್ಷಣಗಳು ಕಾಣುತ್ತವೆ. ಮಾದೇಶ್ವರ ಹುಲಿಯ ಮೇಲೆ ಕುಳಿತು ಸಂಚರಿಸುವುದು ಆ ಸಂತನೊಬ್ಬನ ವಲಸೆಯನ್ನು ಹಾಗೂ ಆತನ ಪಂಥದ ಮೂಲವನ್ನು ಸೂಚಿಸುತ್ತದೆ. ಮಾದೇಶ್ವರನ ಪಂಥದ ಉಳಿವು ಮತ್ತು ಮುಂದುವರಿಕೆ ಈ ದೀಕ್ಷವನ್ನು ಅವಲಂಬಿಸಿದೆ. ಕಣ್ಣ ಬೇಡರು, ಸೋಲಿಗರು, ಹೊಲೆಯ, ಮಾದಿಗ, ಕುರುಬ, ಕುಂಬಾರ, ಉಪ್ಪಾರ, ಪರಿವಾರ, ನಾಯಕ, ಗಾಣಿಗ, ಮಡಿವಾಳ, ಒಕ್ಕಲಿಗ, ಲಿಂಗಾಯಿತ ಹೀಗೆ ಬಹುತೇಕ ಎಲ್ಲಾ ಸಮುದಾಯಗಳು ಒಟ್ಟಾಗಿ ದೀಕ್ಷೆ ಪಡೆಯುವುದರ ಮೂಲಕ ದೇವರ ಗುಡ್ಡರಾಗುತ್ತಾರೆ. ಮಾದೇಶ್ವರ ಬೆಟ್ಟದಲ್ಲಿ ದೀಪಾವಳಿ, ಯುಗಾದಿ, ಶಿವರಾತ್ರಿ, ಸಂಕ್ರಾಂತಿ, ಗೌರಿ, ಮಹಾಲಯ ಅಮಾವಾಸೆ, ಕಾರ್ತಿಕ ತಿಂಗಳು ವಿಶೇಷ ಪೂಜೆಗಳು ಜಾತ್ರೆಗಳು ನಡೆಯುತ್ತವೆ. ಧೂಪದ ಸೇವೆ, ಪಂಜಿನ ಸೇವೆ, ಉರುಳು ಸೇವೆ, ಮುಡಿ ಸೇವೆ, ಒಚ್ಚ ಮಗ್ಗಲು ಸೇವೆ ಎಂಬ ಹೆಸರಿನಲ್ಲಿ ಪರಿಷೆ ಆಚರಣೆಗಳು ನಡೆಯತ್ತವೆ.

**ಮರಡಿ ಗುಡ್ಡ:** ಕೊಳ್ಳೇಗಾಲ ನಗರದಲ್ಲಿ ಒಂದು ಎತ್ತರವಾದ ಬೆಟ್ಟವಿದೆ ಇದನ್ನು ಮರಡಿ ಗುಡ್ಡವೆಂದು ಕರೆಯುತ್ತಾರೆ. ಈ ಬೆಟ್ಟದ ಮೇಲೆ ಮಹದೇಶ್ವರನ ದೇವಾಲಯವಿದೆ. ಆದರೆ ಇದು ಯಾರ ಕಾಲದಲ್ಲಿ ನಿರ್ಮಾಣವಾಗಿದೆ ಎಂಬುದಕ್ಕೆ ಯಾವುದೇ ಆಧಾರಗಳಿಲ್ಲಿಲ್ಲ. ಆದರೆ ಇದೊಂದು ಪ್ರಾಚೀನ ದೇವಾಲಯವೆಂದು ಹೇಳಬಹುದು. ಆದರೂ ಕೂಡ ಇದಕ್ಕೆ ಜಾನಪದೀಯ ಹಿನ್ನೆಲೆ ಇರುವುದನ್ನು ಕಾಣಬಹುದು. ಮರಡಿ ಕ್ಷೇತ್ರ ಹೇಗೆ ಹೆಸರು ಪಡೆಯಿತು ಎನ್ನುವುದಕ್ಕೆ ಶಿವ ಪುರಾಣದಲ್ಲಿ ಒಂದು ಕತೆಯಿದೆ. ಇಲ್ಲಿಯ ಜಾನಪದೀಯ ಕತೆ ಏನು ಎಂದು ಯೋಚಿಸುವುದಾದರೆ ಹಾಗೂ ಜಾನಪದ ದೃಷ್ಠಿಯಿಂದ ನೋಡುವುದಾದರೆ ಮಲೆಮಹದೇಶ್ವರ ಈ ಮಹಿಷ ಮಂಡಲ ಭಾಗದಲ್ಲಿ ಇದ್ದನೆಂದು ಉಲ್ಲೇಖಗಳಿವೆ. ಮೊದಲಿಗೆ ಮಾದೇಶ್ವರನು ಸುತ್ತೂರಿನಲ್ಲಿದ್ದು, ನಂತರ ಕುಂತೂರು ಬೆಟ್ಟ, ಪ್ರಭುಲಿಂಗ ಬೆಟ್ಟದಲ್ಲಿ ಪ್ರಭುಲಿಂಗ ಸ್ವಾಮಿಯ ಶಿಷ್ಯನಾಗಿ ಸ್ವಲ್ಪ ಕಾಲವಿದ್ದು ನಂತರ ಕೊಳ್ಳೇಗಾಲದ ಮರಡಿಗುಡ್ಡದ ಬೆಟ್ಟದ ಮೇಲೆ ಮಂಡಿಯೂರಿ ತದನಂತರ ಕಾಡು ಕಣಿವೆಯ ಮಾರ್ಗವಾಗಿ ಮಾದೇಶ್ವರನ ಬೆಟ್ಟಕ್ಕೆ ಹೋಗಿ ನೆಲೆಯಾದನೆಂದು ಜನಪದ ಹಾಡುಗಳು ತಿಳಿಸುತ್ತವೆ. ಒಂದು ಸಾರಿ ಕುಂತೂರು ಮಠದ ಶಾಂತ ಮಲ್ಲಿಕಾರ್ಜುನರ ಜೊತೆ ಮಾದೇಶ್ವರರು ನಡೆದಾಡುವ ಸಂದರ್ಭದಲ್ಲಿ ಮೂಗೂರಿನ ಹತ್ತಿರ ಹದಿನಾರಿನ ನಂಜರಾಜ ಒಡೆಯನ ಸೈನ್ಯ ಯುದ್ಧ ಮಾಡಿ ಬಳಲಿ ಬೆಂಡಾಗಿದ್ದ ಸಂದರ್ಭದಲ್ಲಿ ರಾಜನು ಇವರನ್ನು ನೋಡಿ ನೀರು ಎಂದು ಬೇಡಲು ಅಲ್ಲೇ ಸೋರೆ ಬುರುಡೆಯಲ್ಲಿದ್ದ ಸ್ವಲ್ಪ ನೀರನ್ನು ಬಿಡುತ್ತ ಬರಲು ಸೈನ್ಯವೆಲ್ಲಾ ನೀರು ಕುಡಿದು ತೃಪ್ತಿ ಪಟ್ಟಿತು. ಆಗ ಶಾಂತ ಮಲ್ಲಿಕಾರ್ಜುನನು ಇದನ್ನು ನೋಡಿ ಶಿರ ಬಾಗಿದನು. ರಾಜ ನಿಮಗೇನು ಬೇಕು ಎಂದು ಕೇಳಿದಾಗ ಏನು ಬೇಡಲಿ ಈ ಶಾಂತ ಮಲ್ಲಿಕಾರ್ಜುನರಿಗೆ ಒಂದು ಕಲ್ಲು ಮಠ ಕಟ್ಟಿಸಿ ಎಂದು ಹೇಳಿದರು. ನಂತರ ರಾಜ ಹೋದ ಮೇಲೆ ನೀವು ನನ್ನ ಗುರು ಎಂದರು. ಶಾಂತ ಮಲ್ಲಿಕಾರ್ಜುನರು ಅದಕ್ಕೆ ಮಾದೇಶ್ವರರು ಇಲ್ಲಿ ತಾವು ಗುರುಗಳು, ದೊಡ್ಡವರು ಹೀಗೆ ಮಾಡಬಾರದಿತ್ತು ಎಂದು ಹೇಳಿ ಅಲ್ಲಿಂದ ಮಠಕ್ಕೆ ಬಂದರು. ಮನಸ್ಸು ತಡೆಯಲಿಲ್ಲ ಬೆಟ್ಟದ ಕೆಳಗೆ ಮಂಡಿಯೂರಿ ಗುರುಗಳಿಗೆ ನಮಸ್ಕರಿಸಿ ಹೊರಟರು. ಕೊಳ್ಳೇಗಾಲದ ಮರಡಿ ಗುಡ್ಡಕ್ಕೆ ಬಂದು ನಿಂತು ನೋಡಿದಾಗ ಅಲ್ಲಿಗೆ ಪ್ರಭುದೇವರ ಬೆಟ್ಟ ಕಾಣುತ್ತಿತ್ತು. ಕುಂತೂರು ಪ್ರಭುದೇವ ಬೆಟ್ಟಕ್ಕಿಂತಲೂ ನನ್ನ ನೆಲೆ ಕೆಳಕ್ಕಿರಬೇಕೆಂದು ಹೇಳಿ ಇಳಿದು ಮುಂದೆ ಹೋದರು. ಕುಂತೂರು ಮಠದ ಗುರುಗಳು ಶಿಷ್ಯನನ್ನು ಅಗಲಿರಲಾರದೆ ಕಾಳಿಂಗ

ಸರ್ಪವನ್ನು ಕಳುಹಿಸಿದರು. ಮಾದಪ್ಪ ಒಪ್ಪದೇ ಹಿಂದಕ್ಕೆ ಕಳುಹಿಸಿದ. ಮಾರಮ್ಮನನ್ನು ಕಳುಹಿಸಿದರು ಮಾದಪ್ಪ ಆಕಾಶಕ್ಕೂ, ಭೂಮಿಗೂ ಕೀಲುಕೊಟ್ಟು ನಿಂತರು. 'ಮಹಾದಪ್ಪ' ಎಂದು ಹೆದರಿ ಆಕೆ ಹೊರಟಳು. ಮತ್ತೆ ಗುರುಗಳು ಬಿಡದೆ ಉತ್ತನಹಳ್ಳಿ ಬಸವನನ್ನು ಕಳುಹಿಸಿದರು ಆತ ಬಂದು ಸಿಂಗಾನಲ್ಲೂರು ತೋಪಿನಲ್ಲಿ ವಿಶ್ರಾಂತಿ ಪಡೆಯುವ ಮಹದೇಶ್ವರರನ್ನು ಬರಹೇಳಲು ಮಾದೇಶ್ವರರು ನೀನು ಇಲ್ಲಿ ನನ್ನನ್ನು ತಡೆದುದಕ್ಕೆ ಕಟ್ಟೆಬಸಪ್ಪ ಎಂದು ಹೆಸರಾಗಲಿ ಎಂದು ಹೇಳಿ ಮುಂದೆ ಸಾಗಿದರು. ಕಣಿವೆ ಹನುಮಂತನನ್ನು ಆಶೀರ್ವದಿಸಿ ನಡೆದರು, ಮಾದಪ್ಪ ತಾಯಿ ಕಟ್ಟಿದ ಉಡಿದಾರ ಬಿಗಿಯಾಗಲು ತಂದೆ ತಾಯಿಯರ ಬಂಧನ ಹರಿಯಿತ್ತೆಂದು ಕಿತ್ತೆಸೆದು ನಡೆದರು. ಅದೇ ಮುಂದೆ ಉಡುದಾರದ ಹಳ್ಳವಾಯಿತು. ಆನೆಮಲೆ, ಜೇನುಮಲೆ, ಕಾನಮಲೆ, ಗುತ್ತಿ ಮಲೆ, ಗುಲಗಂಜಿ ಮಲೆ, ಪತುವ ಮಲೆ, ತುಳುವ ಮಲೆ, ಏಳು ಮಲೆ, ಎಪ್ಪತ್ತೇಳು ಮಲೆಗಳನ್ನು ಹಾಡುತ್ತಾ ಬಿಸಿಲಿಗೆ ವಿಶ್ರಮಿಸಿಕೊಳ್ಳಲು ಒಂದು ಮರದ ನೆರಳಿನಲ್ಲಿ ಕುಳಿತುಕೊಳ್ಳಲು ಅಲ್ಲಿಗೆ ಆನೆಗಳು ಬಂದು ಸೊಂಡಲಿನಿಂದ ತಂಪೆರದವು. ಅವುಗಳಿಗೆ ಆಶೀರ್ವದಿಸಿ ಮುಂದಾದರು. ಅದೇ ಆನೆ ತಲೆದಿಂಬು ಎಂದು ಹೆಸರಾಯಿತು. ನಡುಮಲೆಗೂ ಬಂದರು ಅಲ್ಲಿಗೂ ಪ್ರಭುದೇವರ ಬೆಟ್ಟ ಕಾಣುತ್ತಿರಲು ತಮ್ಮ ಪಾದದಿಂದ ತುಳಿಯಲು ಅದು ವಜ್ರ ಮಲೆಯಾಯಿತು ಅಲ್ಲಿ ತಪವನ್ನಾಚರಿಸಿ ನೆಲೆಗೊಂಡರೆಂಬ ಪ್ರತೀತಿ ಇದೆ. ಹಾಗಾಗಿ ಮಾದೇಶ್ವರರು ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನಲ್ಲಿ ಜಾನಪದೀಯ ದೇವನಾಗಿ ಮನೆ ಮನೆಯ ದೇವರಾಗಿದ್ದಾರೆ. ಇವರ ಬಗ್ಗೆ ಸಾಕಷ್ಟು ಜನಪದ ಹಾಡುಗಳಿವೆ. ಈ ಹಾಡುಗಳ ಹಿನ್ನೆಲೆಯಲ್ಲಿ ಆಯಾ ಗದ್ದುಗೆಗಳನ್ನು ಗುರುತಿಸಬಹುದಾಗಿದೆ.

**ಪರಾಮರ್ಶನ ಗ್ರಂಥ**


1. ಡಾ. ರಾಜಶೇಖರ, ಜಮದಗ್ನಿ 'ಚಾಮರಾಜನಗರ ಜಿಲ್ಲೆಯ ಜಾತ್ರೆ ಮತ್ತು ಹಬ್ಬಗಳು' ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ, ಶಿಗ್ಗಾವಿ ತಾಲ್ಲೂಕು, ಹಾವೇರಿ ಜಿಲ್ಲೆ, 2017.
2. ಮಹಾದೇವ ಶಂಕನಪುರ, 'ಕೊಳ್ಳೇಗಾಲ ತಾಲ್ಲೂಕಿನ ಜಾತ್ರೆಗಳು ಮತ್ತು ಹಬ್ಬಗಳು' ಹೊನ್ನು ಹೊಳೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜನಗರ, 2007
3. ಬಿ ಎಸ್ ಸಣ್ಣಯ್ಯ, 'ದೇವಚಂದ್ರ ವಿರಚಿತ ರಾಜಾವಳಿ ಕತಾಸಾರ' ಪ್ರಕಟಣೆ ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1988
4. ಡಾ. ಪಿ ಕೆ ರಾಜಶೇಖರ, 'ಮಲೈ ಮಹದೇಶ್ವರ' ಸಂಪುಟ 1, ಕನ್ನಡ ಮತ್ತು ಸಂಸ್ಕೃತ ಇಲಾಖೆ. ಬೆಂಗಳೂರು, 2008
5. ಮಹಾದೇವ ಶಂಕನಪುರ, 'ಮಂಟೇಸ್ವಾಮಿ' ಪ್ರಸಾರಾಂಗ, ಕನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮುಕ್ತ ಗಂಗೋತ್ರಿ, ಮೈಸೂರು, 2010